ಅವಕಾಶ ಕೊಡಿ. ಅನಂತರ ಅವರು ಹೇಳಿಕೆ ಮಾಡುತ್ತಾರೆ, ಅದು ನಿಮಗೆ ತೃಪ್ತಿ ತರದಿದ್ದರೆ ಮುಂದಿನದು ನಿಮಗೆ ಬಿಟ್ಟಿದ್ದು.

ಶ್ರೀ ಎಂ.ಪಿ. ವೆಂಕಟೇಶ್: ಅಧ್ಯಕ್ಷರೆ ಇವರಿಗೆ ಸದನ ನಡೆಸುವುದಕ್ಕೆ ಇಷ್ಟವಿಲ್ಲ. ಇದೆಲ್ಲ ಪ್ರಚಾರಕ್ಕಾಗಿ ಮಾಡುತ್ತಿರುವುದು, ದಯವಿಟ್ಟು ಇವರನ್ನೂ ಹೊರಗೆ ಹಾಕಿ. ಆಡಬಾರದ ಆಟವೆಲ್ಲ ಆಡಿದ್ದಾರೆ. ಮೊದಲು ಇವರನ್ನು ಹೊರಗೆ ಹಾಕಿ.

ಅಧ್ಯಕ್ಷರು: ಒಬ್ಬರಿಗೊಬ್ಬರು ಕೆಸರು ಎರಚಿಕೊಂಡು ಮಾತನಾಡುವುದು ಯಾರಿಗೂ ಇದು ಗೌರವ ತರುವುದಿಲ್ಲ, ಸದನ ನಡೆಸಲು ಅವಕಾಶ ಕೊಡುತ್ತೀರೋ ಇಲ್ಲವೋ?

[ಧರಣಿಯಲ್ಲಿದ್ದ ಮಾನ್ಯ ಸದಸ್ಯರು ಇಲ್ಲ ಎಂದು ಕೈಯಾಡಿಸುವರು]

ಅಧ್ಯಕ್ಷರು: ಆಯಿತು. ಈಗ ಸದನವನ್ನು 2.30ಕ್ಕೆ ಮುಂದೂಡಲಾಗಿದೆ.

[ಸದನವು ಮಧ್ಯಾಹ್ನ 12 ಗಂಟೆ 23 ನಿಮಿಷಕ್ಕೆ ಮುಂದೂಡಲ್ಪಟ್ಟಿತು]

(ಸದನವು ಭೋಜನ ವಿರಾಮದ ನಂತರ ಪುನ: 3.39 ಗಂಟೆಗೆ ಸಮಾವೇಶಗೊಂಡಿತು)

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

2. ಪ್ರಕಟಣೆ

ವಿಷಯ: (ಅ) ಮಾನ್ಯ ಸದಸ್ಯರಾದ ತನ್ವೀರ್‌ಸೇಠ್‌ರವರನ್ನು ಮೈಸೂರಿನಲ್ಲಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ.

ದಿನಾಂಕ 11.02.07ರಂದು ವಿಧಾನ ಸಭಾ ಸದಸ್ಯರಾದ ಶ್ರೀ ತನ್ವೀರ್ ಸೇಠ್ ಅವರನ್ನು ಮೈಸೂರಿನಲ್ಲಿ ಕಾವೇರಿ ನ್ಯಾಯಾಧಿಕರಣದ ತೀರ್ಪನ್ನು ಪ್ರತಿಭಟಿಸಿ ರಸ್ತೆ ತಡೆ ಉಂಟು ಮಾಡಿದ್ದಕ್ಕಾಗಿ ಕರ್ನಾಟಕ ಪೊಲೀಸ್ ಕಾಯಿದೆ ಕಲಂ 71ರ ಮೇರೆಗೆ ಬೆಳಿಗ್ಗೆ 11.20 ಗಂಟೆಗೆ ಬಂಧಿಸಿ, ಅದೇ ದಿನ ಅಪರಾಹ್ನ 12.00 ಗಂಟೆಗೆ ಬಿಡುಗಡೆ ಮಾಡಲಾಯಿತು ಎಂದು ಮೈಸೂರು ನಗರ ಪೊಲೀಸ್ ಕಮಿಷನರ್ ಅವರು ತಿಳಿಸಿರುತ್ತಾರೆ.

(ಆ) ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರನ್ನು ರಾಜಭವನದ ಮುಂಭಾಗದಲ್ಲಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ. ಮಾನ್ಯ ಸದಸ್ಯರಾದ ಪಿ.ಸಿ. ಮೋಹನ್‌ರವರನ್ನು ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ.